# ಸಕಲೇಶಪುರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವ ನ್ಯಾಯಾಲಯದಲ್ಲಿ

**ಸಿ.ಸಿ. ನಂ. 30/2025**

| | | |
|---|---|---|
| ಸಾಕ್ಷಿದಾರರ ಹೆಸರು | ಪ್ರವೀಣ್ ಹೆಚ್ ಆರ್ | **P.W-1** |
| ತಂದೆಯ / ಗಂಡನ ಹೆಸರು | ಜಿ ರಾಮೇಗೌಡ | **C.W-1** |
| ವಯಸ್ಸು | 50 ವರ್ಷ | |
| ಉದ್ಯೋಗ | ಹೆಚ್ ಸಿ 105 ಸಕಲೇಶಪುರ ಗ್ರಾಮಾಂತರ ಪೊಲೀಸ್ ಠಾಣೆ | |
| ವಾಸ ಸ್ಥಳ | ಸಕಲೇಶಪುರ | ದಿನಾಂಕ 08-04-2026 |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ನಾನು 2020 ರಿಂದ 2025 ರವರಗೆ ನಾನು ಸಕಲೇಶಪುರ ನಗರ ಠಾಣೆಯಲ್ಲಿ ಪೊಲೀಸ್ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 11-11-2024 ರಂದು ನಾನು ರಾತ್ರಿ ಎಸ್ ಹೆಚ್ ಒ ಕರ್ತವ್ಯದಲ್ಲಿದ್ದಾಗ ಚಾಸಾ 2 ರವರು ರಾತ್ರಿ 2.00 ಗಂಟೆ ಸಮಯದಲ್ಲಿ ಠಾಣೆಗೆ ಹಾಜರಾಗಿ ವರದಿಯೊಂದಿಗೆ ಮಾರುತಿ ಓಮಿನಿ ಕಾರನ್ನು ಹಾಜರುಪಡಿಸಿರುತ್ತಾರೆ. ನಾನು ಸದರಿ ದೂರನ್ನು ಸ್ವೀಕರಿಸಿ ಠಾಣಾ ಮೊ. ಸಂಖ್ಯೆ 283/2024 ರಂತೆ ಪ್ರಕರಣನ್ನು ದಾಖಲು ಮಾಡಿರುತ್ತೇನೆ. ನಂತರ ಪ್ರ.ವ.ವ ಅನ್ನು ದಾಖಲು ಮಾಡಿ ಮಾನ್ಯ ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ದೂರನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ. 1 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 1ಎ ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ 2 ಎಂದು ಗುರುತಿಸಲಾಯಿತು.

ದಿಃ 11-11-2024 ರಂದು ಬೆಳಗ್ಗೆ 11.00 ರಿಂದ 11.45 ರವರೆಗೆ ಸ್ಥಳ ಮಹಜರನ್ನು ಚಾಸಾ 2 , 4 ಮತ್ತು 5 ರವರ ಸಮಕ್ಷಮ ಜರುಗಿಸಿರುತ್ತೇನೆ. ಸ್ಥಳ ಮಹಜರನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ. 3 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 3 ಎ ಎಂದು ಗುರುತಿಸಲಾಯಿತು.

ವಾಹನ ಅಮಾನತ್ತು ಮಹಜರ್ ಅನ್ನು ಅದೇ ದಿನ ಮಧ್ಯಾಹ್ನ 12.00 ರಿಂದ 12.45 ರ ವರೆಗೆ ಚಾಸಾ 2, 4 ಮತ್ತು 5 ರವರ ಸಮಕ್ಷಮ ಠಾಣಾ ಆವರಣದಲ್ಲಿ ಜರುಗಿಸಿರುತ್ತೇನೆ. ಅಮಾನತ್ತು ಮಹಜರ್ ನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ. 4 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 4 ಎ ಎಂದು ಗುರುತಿಸಲಾಯಿತು.

ನಂತರ ಅಮಾನತ್ತುಪಡಿಸಿಕೊಂಡ ವಾಹನವನ್ನು ನಮ್ಮ ಠಾಣಾ ಪಿ.ಎಫ್ ನಂ. 208/2024 ರಂತೆ ನಮೂದಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸ್ವತ್ತಿನ ಪಟ್ಟಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ. 5 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 5 ಎ ಎಂದು ಗುರುತಿಸಲಾಯಿತು.

ದಿಃ 13-11-2024 ರಂದು ಪಿ ಡಬ್ಲು ಡಿ ಅಧಿಕಾರಿಯವರಿಗೆ ಮರಳಿನ ಮೌಲ್ಯ ಮಾಪನ ನೀಡುವಂತೆ ಕೋರಿಕೆ ಪತ್ರ ಸಲ್ಲಿಸಿರುತ್ತೇನೆ. ಕೋರಿಕೆ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ. 6 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 6 ಎ ಎಂದು ಗುರುತಿಸಲಾಯಿತು.

ದಿಃ 19-11-2024 ರಂದು ಪಿ ಡಬ್ಲು ಡಿ ಅಧಿಕಾರಿಯಿಂದ ಮರಳಿನ ಮೌಲ್ಯ ಮಾಪನ ವರದಿಯನ್ನು ಪಡೆದುಕೊಂಡಿರುತ್ತೇನೆ. ಸದರಿ ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ. 7 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 7 ಎ ಎಂದು ಗುರುತಿಸಲಾಯಿತು.

ವಾಹನದ ಮೌಲ್ಯ ಮಾಪನ ನೀಡುವಂತೆ ಪ್ರಾದೇಶಿಕ ಸಾರಿಗೆ ಅಧಿಕಾರಿಗೆ ಕೋರಿಕೆ ಪತ್ರ ಸಲ್ಲಿಸಿರುತ್ತೇನೆ. ಸದರಿ ಕೋರಿಕೆ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ. 8 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 8 ಎ ಎಂದು ಗುರುತಿಸಲಾಯಿತು.

ಮೋಟಾರು ವಾಹನ ನಿರೀಕ್ಷಕರು ನೀಡಿದ ವಾಹನದ ಮೌಲ್ಯ ಮಾಪನ ವರದಿಯನ್ನು ಸ್ವೀಕರಿಸಿರುತ್ತೇನೆ. ಸದರಿ ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ. 9 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 9 ಎ ಎಂದು ಗುರುತಿಸಲಾಯಿತು.

ನಂತರ ಚಾಸಾ 3 ರಿಂದ 5 ರವರ ಹೇಳಿಕೆ ಪಡೆದಿರುತ್ತೇನೆ.

ಸದರಿ ವಾಹನ ಸಂಖ್ಯೆ ಕೆ ಎ 03 ಪಿ 5266 ಮಾರುತಿ ಓಮಿನಿ ವ್ಯಾನ್ ಗೆ ವಾಹನದ ವಿಮಾ ಪಾಲಿಸಿ ಮತ್ತು ಹೊಗೆ ಮಾಲಿನ್ಯ ಪ್ರಮಾಣ ಪತ್ರ ಇರುವುದಿಲ್ಲ ಎಂದು ತನಿಖೆಯಿಂದ ಕಂಡುಬಂದಿರುತ್ತದೆ.

ಈಗ ನನಗೆ ತೋರಿಸಿದ ಛಾಯಾಚಿತ್ರವು ಕೃತ್ಯ ಸ್ಥಳದಲ್ಲಿ ಮಹಜರ್ ಕಾಲದಲ್ಲಿ ತೆಗೆದಿರುವ ಛಾಯಾಚಿತ್ರಗಳಾಗಿರುತ್ತವೆ. ಸದರಿ ಛಾಯಾಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ 10 ಮತ್ತು 11 ಎಂದು ಗುರುತಿಸಲಾಯಿತು. ಆರೋಪಿತರು ಮರಳು ಸಾಗಾಟ ಮಾಡಲು ಬಳಸಿದ ವಾಹನದ ಛಾಯಾಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ 12 ರಿಂದ 14 ಎಂದು ಗುರುತಿಸಲಾಯಿತು. ಸಿ ಡಿ ಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ 15 ಎಂದು ಗುರುತಿಸಲಾಯಿತು. ಛಾಯಾಚಿತ್ರಗಳನ್ನು ಸಿ.ಡಿ ಮಾಡಿದ ಬಗ್ಗೆ ಪ್ರಮಾಣ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ 16 ಎಂದು , ಸಾಕ್ಷಿಯ ಸಹಿಯನ್ನು ನಿಪಿ 16 ಎ ಎಂದು ಗುರುತಿಸಲಾಯಿತು. ಆರೋಪಿತರು ಅಕ್ರಮವಾಗಿ ಮರಳನ್ನು ಕಳ್ಳತನಮಾಡಿರುವುದು ಸಾಬೀತಾದ ಕಾರಣ ಆರೋಪಿತರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ. 1ನೇ ಆರೋಪಿಯನ್ನು ನೋಡಿದರೆ ಗುರುತಿಸಬಲ್ಲೆನು, ಈ ದಿನ ಗೈರು ಹಾಜರಾಗಿದ್ದು ಆರೋಪಿಯ ಗುರುತಿನ ಬಗ್ಗೆ ಯಾವುದೇ ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ನುಡಿದಿರುತ್ತಾರೆ. 2 ಮತ್ತು 3ನೇ ಆರೋಪಿತರನ್ನು ನ್ಯಾಯಾಲಯದ ಮುಂದೆ ನೋಡಿ ಗುರುತಿಸಿರುತ್ತೇನೆ.

**ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಡಿ ಎನ್ ವಕೀಲರಿಂದ**

ಆರೋಪಿತರ ವಶದಿಂದ ಒಟ್ಟು 15 ಚೀಲ ಮರಳನ್ನು ಅಮಾನತ್ತುಪಡಿಸಿ ಕೊಂಡಿರುತ್ತೇವೆ. ಆರೋಪಿತರು ಸದರಿ ಮರಳನ್ನು ಕಳ್ಳತನ ಮಾಡಿ ಮಾರಾಟ ಮಾಡುವ ಉದ್ದೇಶದಿಂದ ಸಾಗಾಟ ಮಾಡುತ್ತಿದ್ದರು. ಮಹಜರ್ ಕಾಲದಲ್ಲಿ ಸಾಕ್ಷಿದಾರರಾದ ಚಾಸಾ 4 ಮತ್ತು 5 ರವರು ಸಕಲೇಶಪುರದ ಹೇಮಾವತಿ ಬ್ರಿಡ್ಜ್ ಬಳಿ ಸಿಕ್ಕಿರುತ್ತಾರೆ. ಓಮಿನಿ ಕಾರು 1ನೇ

ಆರೋಪಿಗೆ ಸೇರಿರುತ್ತದೆ. ಆರೋಪಿತರಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇರದೇ ಇದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ತಕ್ಷೀರು ಸ್ಥಳದಲ್ಲಿ ಯಾವುದೇ ಮಹಜರ್ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಪಂಚರಿಗೆ ಮಹಜರ್ ಪೂರ್ವದಲ್ಲಿ ಯಾವುದೇ ನೋಟೀಸು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಪಂಚರ ಸಮಕ್ಷಮ ಯಾವುದೇ ಸ್ವತ್ತನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಮರಳು ಕಳ್ಳತನ ಮಾಡಿರುವ ತಕ್ಷೀರು ಸ್ಥಳದಲ್ಲಿ ಮರಳು ಸಂಗ್ರಹಣೆ ಮಾಡಲು ಬಳಸಿದ ಉಪಕರಣಗಳು ಪತ್ತೆಯಾಗಿರುವುದಿಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸಇ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ , ಸಕಲೇಶಪುರ